ಮುಹೂರ್ತ ಇಡೋದಿಲ್ಲ. ಇಬ್ಬರ ಕಡೆಯೂ ದುಡ್ಡಿದ್ದರೆ ತಾನೆ! ಒಂದು ಅಳತೇಲಿ ಮದುವೆ ನಡೀತು ಅಂತ ಇಟ್ಕೊಳ್ಳಿ. ಅಷ್ಟು ಹೊತ್ತಿಗಾಗಲೇ ಯಜಮಾನರು ಬಸವೇಶ್ವರ, ಶ್ರೀರಾಮ, ಭರತ, ನಾರದ ಇಂಥಾ ಪಾತ್ರಗಳನ್ನೆಲ್ಲ ಮಾಡಿ ಸುಬ್ಬಯ್ಯ ನಾಯಿಡು ಅವರ ಸಾಹಿತ್ಯ ಸಾಮ್ರಾಜ್ಯ ಕಂಪನಿ ನಾಟಕಗಳಲ್ಲಿ ಸಾಕಷ್ಟು ಹೆಸರು ಮಾಡಿದ್ದರು; ಆದರೆ ಕೈಲಿ ಮಾತ್ರ ಕಾಸಿಲ್ಲ. ನಾಯ್ಡು ಹತ್ತಿರ 500 ರೂಪಾಯಿ ಸಾಲ ಇಸ್ಕೊಂಡು ಬಂದಿದ್ದರಂತೆ. ಒಟ್ಟಿನಲ್ಲಿ ನಷ್ಟವಿಲ್ಲದೆ ಕಷ್ಟದಲ್ಲೇ ನಡೆದ ಮದುವೆ.

ನಾನು ಹದಿನೈದನೆ ವಯಸ್ಸಿಗೆ ಅತ್ತೆ ಮನೆಗೆ ಹೋದೆ. ನನ್ನ ಅತ್ತೆಗೆ 5 ಜನ ಮಕ್ಕಳು. ಅದರಲ್ಲಿ ಮೂವರು ಗಂಡು, ಇಬ್ಬರು ಹೆಣ್ಣು. ಯಜಮಾನರ ಕೊನೇ ತಮ್ಮ ಒಬ್ಬ ಅಷ್ಟು ಹೊತ್ತಿಗಾಗಲೇ ತೀರಿಕೊಂಡಿದ್ದ. ಆಮೇಲೆ ಇಬ್ಬರು ತಂಗಿಯರಲ್ಲಿ ಒಬ್ಬಾಕೆ ಕಾಲವಶಳಾದಳು. ಈಗ ಇವರಿಗೆ ಉಳಿದಿರೋರು ಒಬ್ಬ ತಮ್ಮ (ವರದರಾಜ) ಒಬ್ಬಳು ತಂಗಿ ಅಷ್ಟೆ. ಅತ್ತೆಯವರಿಗಂತೂ ಇವರನ್ನು ಬಿಟ್ಟಿರೋದೇ ಕಷ್ಟ. ನನ್ನ ಅತ್ತೆಗೆ ಮದುವೆಯಾಗಿ ಎರಡು ವರ್ಷಗಳಾದ ನಂತರವೂ ಮಕ್ಕಳಾಗಿರಲಿಲ್ಲವಂತೆ. ಆಗ ಒಮ್ಮೆ ಕನಕಪುರದ ಹತ್ತಿರ ಇದೆಯಲ್ಲಾ, ಮುತ್ತತ್ತಿ... ಅಲ್ಲಿರೋ ಆಂಜನೇಯ ಸ್ವಾಮಿ ಗುಡಿಗೆ ಬರ್ತೀನಿ ಅಂತ ಮಾವ ಹರಕೆ ಹೊತ್ತುಕೊಂಡಿದ್ದರಂತೆ. ಅಲ್ಲಿನ ಪುರೋಹಿತರು ಅತ್ತೆಗೆ ಪ್ರಸಾದ ದಯಪಾಲಿಸಿ ಖಂಡಿತ ಭಯ ಪಡಬೇಡಿ ಅಂತ ಭರವಸೆ ಕೊಟ್ಟರಂತೆ. ಅತ್ತೆಯವರು ಪ್ರಸಾದ ತಿಂದ ಎರಡು ತಿಂಗಳಲ್ಲೇ ಗರ್ಭಿಣಿಯಾದರಂತೆ. ಮುತ್ತತ್ತಿ ಆಂಜನೇಯನ ಕೃಪೆ ಅಂತ ಮುತ್ಯಪ್ರಾಯ ಅಂತ ಮಾವ ಇವರಿಗೆ ಮುತ್ತುರಾಜ ಅಂತ ಹೆಸರಿಟ್ಟರಂತೆ. ಇವರು ಹುಟ್ಟಿದ್ದು ಗಾಜನೂರಿನಲ್ಲಿ ಅಂತ ಈಗಾಗಲೇ ಗೊತ್ತೇ ಇದೆಯಲ್ಲ! ನನ್ನ ಮಾವ ಸದಾ ಹೇಳುತ್ತಿದ್ದರು, ಇವರು ಹುಟ್ಟಿದ ದಿನ ಗಾಜನೂರಿನಲ್ಲಿ ಭಾರಿ ಮಳೆ ಬಿದ್ದು ಒಣಗಿಹೋಗಿದ್ದ ನೆಲವೆಲ್ಲ ತಂಪಾಗಿತ್ತಂತೆ! ಬಯಸಿ ಬಯಸಿ ಹುಟ್ಟಿದ ಮಗ ಅಲ್ವಾ, ಆಗೆಲ್ಲ ಗಂಡು ಮಕ್ಕಳು ಯಾವ ಊರಿನಲ್ಲಿದ್ದರೆ ಅಲ್ಲೇ ಹೆಂಡತಿ, ತಾಯಿ ಎಲ್ಲರೂ. ಹೀಗಾಗಿ ಇವರು ಹೋದ ಕಡೆಯಲ್ಲ ನನ್ನ ಅತ್ತೇನೂ ಸುತ್ತೋಕೆ ಶುರು ಮಾಡಿದರು.

ನನ್ನ ಅತ್ತೆಯವರದ್ದು ಇವರಂತೆಯೇ ಮೃದು ಸ್ವಭಾವ. ಅವರು ತೀರಿಕೊಂಡು ಈಗ ಎರಡು ವರ್ಷಗಳಾಯಿತಷ್ಟೆ. ನನಗೆ ಮದುವೆಯಾದ ಹೊಸದರಲ್ಲಿ ಏನೂ ಮನೆಕೆಲಸ ಬಾರದು. ನಿಧಾನವಾಗಿ ಸಮಾಧಾನದಿಂದ ಹೇಳಿಕೊಡೋರು. ಆದರೆ ಇಡೀ ಮನೆಯ ವಾತಾವರಣ ಅಭಿನಯ ಕಲೆಗೆ ಮೀಸಲಿಟ್ಟದ್ದು. ಅಷ್ಟು ಹೊತ್ತಿಗಾಗಲೇ ದುಮ್ಮಿ ಮುರುಗರಾಯಪ್ಪ, ವೀರಣ್ಣ, ಸಿ.ಆರ್. ಬಸವರಾಜ್ ಇವರೆಲ್ಲ ಸೇರಿ 'ಕರ್ನಾಟಕ ಲಮ್ಸ್' ಅಂತ ಶುರು ಮಾಡಿದರು 1953ರ ಆಗಸ್ಟ್‌ನಲ್ಲಿ. 'ಬೇಡರ ಕಣ್ಣಪ್ಪ' ಚಿತ್ರಕ್ಕೆ ಯಜಮಾನರು ನಾಯಕನಟ ಆದರು. ನಾವು ಮದರಾಸಿಗೆ ಹೋಗಬೇಕಾಯಿತು. ಅದೇ ವರ್ಷದ ಜುಲೈನಲ್ಲಿ ಕರ್ನಾಟಕ ಫಿಲಿಮ್ಸ್ ಅದೇ ಚಿತ್ರವನ್ನು ತೆಲುಗು ಭಾಷೆಯಲ್ಲಿ ತಯಾರಿಸಿದಾಗ ಮತ್ತೆ ಮದರಾಸಿಗೆ ತೆರಳಿ ಅಲ್ಲೇ ತಳವೂರಿಬಿಟ್ಟೆವು. ಮದರಾಸಿನಲ್ಲಿ ನಾವಿದ್ದದ್ದು ಮೂವತ್ತು ವರ್ಷಗಳ ದೀರ್ಘಕಾಲ. ಅಲ್ಲಿ ನಮಗೆ ಏನೇನೂ ತೊಂದರೆಯಾಗಲಿಲ್ಲ ಗೊತ್ತಾ... ನಾವು ಕನ್ನಡಿಗರಾದರೂ ಅಲ್ಲಿಯ ಜನ ನಮ್ಮನ್ನು ಎಷ್ಟು ವಿಶ್ವಾಸದಿಂದ ನಡೆಸಿಕೊಂಡರು ಅಂತಾ... ಈಗಲೂ ಅಷ್ಟೇ. ಅದೇ ಆದರ, ಪ್ರೀತಿ. ಆಗೆಲ್ಲ ಕನ್ನಡದಲ್ಲಿ ಹೆಚ್ಚು ಚಿತ್ರಗಳು ಇರಲೇ ಇಲ್ಲವಲ್ಲ. ವರ್ಷದಲ್ಲಿ ಎರಡೋ ಮೂರೋ ಚಿತ್ರಗಳು ಬರ್ತಿದ್ದವು. ಅದೂ ರಾತ್ರಿ ಸಮಯದಲ್ಲಿ ಶೂಟಿಂಗ್‌ಗಳು. ಕನ್ನಡ ನಾಡಿನಿಂದ ದೂರವಿದ್ದರೂ ನಮ್ಮ ಭಾಷೆಯ ಚಿತ್ರರಂಗ ಮುಂದೆ ಬರಬೇಕು ಅಂತ ಯಜಮಾನರ ಮನಸ್ಸು ತುಡಿದುಕೊಳ್ಳುತ್ತಲೇ ಇತ್ತು. ಜಿ.ವಿ. ಐಯ್ಯರ್, ಬಾಲಕೃಷ್ಣ, ನರಸಿಂಹರಾಜು ಹಾಗೂ ಯಜಮಾನರು ಒಟ್ಟಾಗಿ ಸೇರಿ 'ಕನ್ನಡ ಚಲನಚಿತ್ರ ಕಲಾವಿದರ ಸಂಘ' ಅಂತ ಸ್ಥಾಪನೆ ಮಾಡಿ 'ರಣಧೀರ ಕಂಠೀರವ' ಸಿನಿಮಾ ತಯಾರಿಸಿದರು (1962). ಈ ಸಂಸ್ಥೆಗಾಗಿ ದುಡಿದವರು ಅದೆಷ್ಟು